# ರಾಮಕೃಷ್ಣ-ವಿವೇಕಾನಂದ ಭಾವಧಾರೆಗೆ ಸ್ವಾಮಿ ಸೋಮನಾಥಾನಂದರ ಕೊಡುಗೆ

ಡಾ. ಇ. ವಸಂತ ಕುಮಾರ್

ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಪ್ರಕಾಶನವನ್ನು ಕಟ್ಟಿ ಬೆಳೆಸಿದ ಕೀರ್ತಿ, ಹಾಗೂ ಹಲವು ಮಂದಿ ಆಧ್ಯಾತ್ಮಿಕ ಒಲವುಳ್ಳ ಯುವಕ-ಯುವತಿಯರಿಗೆ ಮಾರ್ಗದರ್ಶನ ನೀಡಿ ಮುನ್ನಡೆಸಿದ ಹಿರಿಮೆ ಸ್ವಾಮಿ ಸೋಮನಾಥಾನಂದರದು. ದಿವ್ಯತ್ರಯರ ಸಂದೇಶವನ್ನು ಕರ್ನಾಟಕದ ಹಲವು ಭಾಗಗಳಿಗೆ ಕೊಂಡೊಯ್ದ ಅವರು ನಿರಾಡಂಬರ ವ್ಯಕ್ತಿತ್ವದಿಂದ ಕೂಡಿದ್ದ ಅಪೂರ್ವ ಸಂನ್ಯಾಸಿಗಳಾಗಿದ್ದರು. ಅವರನ್ನು ಹತ್ತಿರದಿಂದ ಕಂಡಿದ್ದ ಲೇಖಕರು, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಸಂಖ್ಯಾಶಾಸ್ತ್ರದ ಪ್ರಾಧ್ಯಾಪಕರು. ಶ್ರೀರಾಮಕೃಷ್ಣ ಆಶ್ರಮದ ಭಕ್ತರಾಗಿರುವ ಅವರು 'ವಿವೇಕಪ್ರಭ'ದಲ್ಲಿ ಅನೇಕ ಲೇಖನಗಳನ್ನು ಬರೆದಿದ್ದಾರೆ.

ದೇವಗಂಗಾ ಸ್ರೋತದಂತೆ, ಶ್ರೀರಾಮಕೃಷ್ಣರ ಭಾವಧಾರೆ ಹಿಂದೂಧರ್ಮದ ಹಿಮಾಲಯಸದೃಶ ತತ್ತ್ವಸ್ತೋಮಗಳಿಂದ ಎಲ್ಲ ಅವತಾರಗಳ ಭಾವಗಂಗೋತ್ರಿಯಿಂದ ಹರಿದು ಬಂದಂತಿದೆ. ಸಣ್ಣ ಝುರಿಯಂತೆ ಜಿನುಗುತ್ತಾ ಅದು ಈಗ ವಿಶ್ವದಾದ್ಯಂತ ಸತ್ಯಪ್ರಿಯ-ಧರ್ಮನಿಷ್ಠ ಜೀವಿಗಳ ಹೃದಯಾಂತರಾಳವನ್ನು ಪ್ರವೇಶಿಸಿದೆ. ಶ್ರೀರಾಮಕೃಷ್ಣರ ಸರ್ವಧರ್ಮಸಮನ್ವಯ ಸಂದೇಶ ಸ್ವಾಮಿ ವಿವೇಕಾನಂದರ ವಾಣಿಯಿಂದ ಚಿಕಾಗೋ ಸರ್ವಧರ್ಮ ಸಮ್ಮೇಳನದ ಬೃಹತ್ ವೇದಿಕೆಯಿಂದ ಬಿತ್ತರವಾಗಿ ವಿಸ್ತಾರವಾದ ಯಮುನೆಯಂತೆ ಇಳೆಯ ಮೇಲೆ ಪಸರಿಸಿದೆ. ರೂಢಿಯಂತೆ ನಾವು ರಾಮಕೃಷ್ಣ-ವಿವೇಕಾನಂದ ಭಾವಧಾರೆ ಎಂದು ಕರೆದರೂ, ಗುಪ್ತಗಾಮಿನಿ ಸರಸ್ವತಿಯಂತೆ ಶ್ರೀಶಾರದಾದೇವಿಯವರ ತಂಪಾದ ಕರುಣಾಮಯ ಜೀವನ, ಸಂದೇಶಗಳು ಅಷ್ಟೇ ಚಿರಂತನವಾಗಿ ಆಳವಾಗಿ ಭವಜೀವಿಗಳ ಹೃನ್ಮನಗಳಲ್ಲಿ ಸುಳಿದಾಡುತ್ತಿವೆ. ಕರ್ನಾಟಕದಲ್ಲಿ ರಾಮಕೃಷ್ಣ-ಭಾವಧಾರೆಯ ನದಿ ಸ್ವಾಮಿ ಸೋಮನಾಥಾನಂದರ ಬರವಣಿಗೆ ಮತ್ತು ಪ್ರವಚನಗಳಿಂದ ಅವ್ಯಾಹತವಾಗಿ ಹರಿಯಿತು.

## ಗ್ರಂಥರಚನೆ

**'ಶ್ರೀಶಾರದಾದೇವಿ'** - ಇದು ಸ್ವಾಮಿ ಸೋಮನಾಥಾನಂದರ ಚೊಚ್ಚಲ ಕೃತಿ. ಮುನ್ನೂರು ಪುಟಗಳ **'ಭಗವಾನ್ ಶ್ರೀರಾಮಕೃಷ್ಣ'** ಮೊದಲು ರಚಿತವಾಯಿತು. ನಂತರ, ೮೦೦ ಪುಟಗಳಿಗೂ ಮೀರಿದ **'ಗುರುದೇವ ಶ್ರೀರಾಮಕೃಷ್ಣ'** ಬರೆದರು. ಶ್ರೀರಾಮಕೃಷ್ಣ ಮತ್ತು ಶಾರದಾದೇವಿಯವರಿಗೆ ಸಂಬಂಧಪಟ್ಟ ಪುಸ್ತಕಗಳು ಹೊರಬರುತ್ತಿದ್ದಂತೆ ಸ್ವಾಮಿ ವಿವೇಕಾನಂದರ ಬಿಡಿ ಉಪನ್ಯಾಸಗಳ ಕನ್ನಡ ಆವೃತ್ತಿಗಳೂ ಕುತೂಹಲಕಾರಿ ಶೀರ್ಷಿಕೆಯೊಂದಿಗೆ ಒಂದಾದ ಮೇಲೆ ಒಂದರಂತೆ ಹೊರಬಂದುವು.

ಸ್ವಾಮಿ ವಿವೇಕಾನಂದರ ಸಮಗ್ರ ಉಪನ್ಯಾಸಗಳ ಎಂಟು ಸಂಪುಟಗಳ ಸಂಕಲನವನ್ನು ಸೋಮನಾಥಾನಂದರು ವಿವೇಕಾನಂದರ ಜನ್ಮಶತಾಬ್ದಿಗೆ ಒಂದು ವರ್ಷ ಮೊದಲೇ (೧೯೬೨) ಪ್ರಕಟಿಸಿದರು. ಅದೊಂದು ಬೃಹತ್ ಅನುವಾದ ಕಾರ್ಯ; ಇದು ಭಾರತದ ಎಷ್ಟೋ ಭಾಷೆಗಳಲ್ಲಿ ಆಗ ಇನ್ನೂ ಆಗಿರಲಿಲ್ಲ. ಸ್ವಾಮೀಜಿಯವರ ಸಾಹಿತ್ಯ ರಾಶಿಯಿಂದ ಆಯ್ದ ಮಾಣಿಕ್ಯಗಳ ಕನ್ನಡ ಅನುವಾದ,



೨೦೦ ಪುಟಗಳ **'ಸ್ವಾಮಿ ವಿವೇಕಾನಂದರ ಬೋಧನೆಯ ಸಾರ'**ವೂ ಪ್ರಕಟವಾಯಿತು. ಸ್ವಾಮಿ ವಿವೇಕಾನಂದರ ಹೊರತಾಗಿ ಇನ್ನುಳಿದ ಹದಿನೈದು ನೇರ ಶಿಷ್ಯರ ಸಂಕ್ಷಿಪ್ತ ಜೀವನಚರಿತ್ರೆಯ ಸ್ವಾಮಿ ಗಂಭೀರಾನಂದರ ಇಂಗ್ಲಿಷ್ ಪುಸ್ತಕ ೧೯೬೦ರ ದಶಕದಲ್ಲಿ ಬರುತ್ತಿದ್ದಂತೆ, ಸೋಮನಾಥಾನಂದರು ಕನ್ನಡದಲ್ಲಿ **'ರಾಮಕೃಷ್ಣ ಶಿಷ್ಯಕೋಟಿ'** ಎಂಬ ಸುಂದರವಾದ ಪುಸ್ತಕ ಬರೆದರು. **'ಸ್ತವಕುಸುಮಾಂಜಲಿ'** ಎಂಬ ವಿವಿಧ ಸ್ತೋತ್ರಗಳ ವಿಶಿಷ್ಟ ಸಂಕಲನದಲ್ಲಿ ಶಾಂತಿಮಂತ್ರಗಳಿಂದ ಪ್ರಾರಂಭವಾಗಿ ಹಲವು ದೇವದೇವಿಯರ ಮತ್ತು ರಾಮಕೃಷ್ಣರ ಸ್ತೋತ್ರಗಳನ್ನೊಳಗೊಂಡು, ಬ್ರಹ್ಮಸ್ತೋತ್ರದವರೆಗೆ ಅಣಿಯಾಗಿ ಜೋಡಿಸಲ್ಪಟ್ಟು ಪ್ರತಿ ಶ್ಲೋಕಕ್ಕೂ ಸರಳವಾದ ಅರ್ಥವನ್ನು ಬಲಭಾಗದಲ್ಲಿ ಕೊಡಲಾಗಿದೆ. ಧ್ಯಾನಕ್ಕೆ ಮುಂಚೆ ಪಠಿಸಿದರೆ ನಮ್ಮ ಮನಸ್ಸು ಧ್ಯಾನಕ್ಕೆ ಅಣಿಯಾಗುವುದು, ಧ್ಯಾನದ ನಂತರ ಮನನ ಮಾಡಿದರೆ ನಮ್ಮ ಮನಸ್ಸು ಉತ್ತಮ ಸ್ಥಿತಿಯಲ್ಲಿ ಮುಂದುವರಿಯುವುದು ಎಂಬ ವಿಷಯವನ್ನು ಮುನ್ನುಡಿಯಲ್ಲಿ ವಿವರಿಸಿರುವುದು ಮನೋಜ್ಞವಾಗಿದೆ. ಮುನ್ನುಡಿಯೇ ಸ್ತೋತ್ರ ಪಠಣದಲ್ಲಿ ನಮ್ಮ ಶ್ರದ್ಧೆಯನ್ನು ಹೆಚ್ಚಿಸಿ, ಭಕ್ತಿಯನ್ನು ಮೂಡಿಸುವುದು. ಇದರಂತೆ, **'ಶಿವಾನಂದಲಹರೀ'**, **'ಸೌಂದರ್ಯಲಹರೀ,'** **'ಅಷ್ಟಾವಕ್ರ**

ಗೀತಾ', ಮತ್ತು '**ಅವಧೂತಗೀತಾ**' ಎಂಬ ಪುಟ್ಟ ಪುಸ್ತಕಗಳು ೧೯೫೦ರ ದಶಕದಲ್ಲಿಯೇ ಪ್ರಕಾಶಿಸಲ್ಪಟ್ಟವು. ಹೇಗೆ '**ಸ್ವಾಮಿ ವಿವೇಕಾನಂದ ಕೃತಿಶ್ರೇಣಿ**' ಸೋಮನಾಥಾನಂದರ ಬೃಹತ್ ಅನುವಾದ ಕಾರ್ಯವೋ, ಹಾಗೆಯೇ '**ಗೀತಾಭಾವಧಾರೆ**' ಮತ್ತು '**ಉಪನಿಷತ್ ಭಾವಧಾರೆ**' ಅವರ ೮೦೦ ಪುಟಗಳ ಬೃಹತ್ ಗ್ರಂಥಗಳು. ಇವು ೨೫ ವರ್ಷಗಳು ಗೀತೆ ಮತ್ತು ಉಪನಿಷತ್ತುಗಳ ಬಗ್ಗೆ ಅವರು ಮಾಡಿದ ಪ್ರವಚನಗಳ ಫಲ. ಭಕ್ತರ ಕೋರಿಕೆಗೆ ದೊರೆತ ವರ. ಇವರಿಂದ ಎಲ್ಲೆಡೆ ಇದ್ದ ಮುಮುಕ್ಷುಗಳಿಗೂ ಆ ವರ ದೊರೆತಂತಾಯಿತು. ಧ್ಯಾನಶ್ಲೋಕಗಳನ್ನೂ ಬಿಡದೆ, ಪ್ರತಿ ಶ್ಲೋಕದ, ಪ್ರತಿ ಪದದ ಸರಳ ವಿವರಣೆ ಇರುವ ಇಂತಹ ಗ್ರಂಥ ಅಲಭ್ಯ. 'ಉಪನಿಷತ್ ಭಾವಧಾರೆ' ಮುದ್ರಣಕ್ಕೆ ಹೋಗುತ್ತಿದ್ದಂತೆ ಆಗ ಮೈಸೂರು ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಶಾಂಭವಾನಂದರು ೧೯೭೨ರಲ್ಲಿ ಕಾಲವಾದರು. ಸೋಮನಾಥಾನಂದರು ಮೈಸೂರು ಆಶ್ರಮದ ಅಧ್ಯಕ್ಷರಾಗಬೇಕಾಯಿತು. ಅವರ ಮೂವತ್ತು ವರ್ಷಗಳ ಬಿರುಸಿನ ಸಾಹಿತ್ಯ ನಿರ್ಮಾಣಕಾರ್ಯ ಸ್ಥಗಿತವಾಯಿತು. ಆದರೂ ನಂತರದ ೧೫ ವರ್ಷಗಳಲ್ಲಿ ಅನೇಕ ಪುಸ್ತಕಗಳನ್ನು ಬರೆದರು. '**ಲಲಿತಾ ಮಾತೆ**', '**ಸಾವಿನ ಸಮಸ್ಯೆ**', '**ನಿವೇದಿತಾ**', ಮತ್ತು '**ಪತಿತಪಾವನೆ ಶಾರದಾ**' – ಈ ನಾಲ್ಕು ಕಿರುಪುಸ್ತಕಗಳೇ ಅವರ ಕೊನೆಯ ಬರಹ. ನಂತರ ಹತ್ತು ವರ್ಷಗಳು ಮೈಸೂರು ಆಶ್ರಮದಲ್ಲೇ ಇದ್ದರು. ಅನಾರೋಗ್ಯದ ಕಾರಣ ಕೊನೆಯ ಏಳು ವರ್ಷಗಳು ನಿವೃತ್ತರಾಗಿ ವಿಶ್ರಾಂತ ಜೀವನ ನಡೆಸಿದರು.

### ಪ್ರವಚನಗಳು

ಪ್ರವಚನವು ಸೋಮನಾಥಾನಂದರ ವ್ಯಕ್ತಿತ್ವದ ಇನ್ನೊಂದು ಮುಖ. ಎಷ್ಟು ಕಾಲ ಬರೆದರೋ ಅಷ್ಟು ಕಾಲ ಪ್ರವಚನಗಳನ್ನು ಕೊಟ್ಟರು. ಪ್ರತಿ ಭಾನುವಾರ ಸಂಜೆ ೬ ರಿಂದ ೭ ಕನ್ನಡದಲ್ಲಿ ಅವರ ಪ್ರವಚನವಿರುತ್ತಿತ್ತು. ಗೀತೆ, ಉಪನಿಷತ್ತು, ಲಲಿತಾ ಸಹಸ್ರನಾಮ, ನಾರದ ಭಕ್ತಿಸೂತ್ರ, ದಿವ್ಯತ್ರಯರ ಜೀವನ ಮುಂತಾದ ವಿವಿಧ ವಿಷಯಗಳ ಮೇಲೆ ಮಾತನಾಡುತ್ತಿದ್ದರು. ಆಶ್ರಮದಲ್ಲಿ ನಡೆಯುತ್ತಿದ್ದ ಆಧ್ಯಾತ್ಮಿಕ ಶಿಬಿರದಲ್ಲಿ 'ರಾಮಕೃಷ್ಣರು ಮತ್ತು ಗೃಹಸ್ಥರು', 'ಕರುಣಾಜಾಹ್ನವಿ ಶ್ರೀಶಾರದಾದೇವಿ', 'ವಿವೇಕಾನಂದರ ಶೀಲ', 'ಸಮನ್ವಯಾಚಾರ್ಯ ರಾಮಕೃಷ್ಣ' ಮುಂತಾದ ವಿಷಯಗಳ ಮೇಲೆ ಮಾತನಾಡುತ್ತಿದ್ದರು. ಅವರ ಪ್ರವಚನಗಳನ್ನು ಕೇಳಲು ಬರುತ್ತಿದ್ದ ಅನೇಕರು ಸಂನ್ಯಾಸಿ ಮತ್ತು ಸಂನ್ಯಾಸಿನಿಯರಾಗಿದ್ದಾರೆ. ರಾಮಕೃಷ್ಣ ಜಯಂತಿಯ ಮಾರನೆ ದಿನದಿಂದ 'ಪ್ರವಚನ ಸಪ್ತಾಹ' ಎಂಬ ಶೀರ್ಷಿಕೆಯಲ್ಲಿ ಒಂದೇ ವಿಷಯದ ಮೇಲೆ ಏಳು ದಿನಗಳು ೪೫ ನಿಮಿಷಗಳ ಕಾಲ ಮಾತನಾಡುತ್ತಿದ್ದರು. ಮಂಗಳೂರು, ಪೊನ್ನಂಪೇಟೆ, ಬೆಂಗಳೂರಿನ ಆಶ್ರಮದ ವಾರ್ಷಿಕೋತ್ಸವಗಳಲ್ಲಿ ಪ್ರವಚನ, ಭಾಷಣ ಮಾಡುತ್ತಿದ್ದರು. ಸ್ವಾಮಿ ಯತೀಶ್ವರಾನಂದರ (೧೯೫೧) ಕಾಲದಿಂದ ೧೯೮೫ರವರೆಗೆ ತಿಂಗಳಿಗೊಮ್ಮೆ ಬಸವನಗುಡಿ ಆಶ್ರಮದಲ್ಲಿ ಪ್ರವಚನ ಮಾಡುತ್ತಿದ್ದರು. ಲಖನೌ ಆಶ್ರಮದಲ್ಲಿ ಇಂಗ್ಲಿಷಿನಲ್ಲಿ ಪ್ರವಚನ ಮಾಡಲು ಸ್ವಾಮಿ ಶ್ರೀಧರಾನಂದರು ಬಹಳ ಇಷ್ಟಪಟ್ಟು ಪ್ರತಿ ವರ್ಷ ಇವರನ್ನು ಕರೆಸಿಕೊಳ್ಳುತ್ತಿದ್ದರು. ಸತ್ಸಂಗಗಳಲ್ಲಿ, ಸಾರ್ವಜನಿಕ ಸಮಾರಂಭಗಳಲ್ಲಿ, ಸ್ವಾತಂತ್ರ್ಯೋತ್ಸವಗಳಲ್ಲಿ, ದೇವಸ್ಥಾನಗಳಲ್ಲಿ, ಸಂಘ-ಸಂಸ್ಥೆಗಳಲ್ಲಿ ವರ್ಷದುದ್ದಕ್ಕೂ ಅವರಿಗೆ ಮಾತನಾಡಲು ಆಹ್ವಾನವಿರುತ್ತಿತ್ತು. ದೇವಸ್ಥಾನದಲ್ಲಿ ಯಜ್ಞ-ಯಾಗಗಳ ಸಂದರ್ಭದಲ್ಲಿ ಗೀತೆಯ ಯಜ್ಞದೃಷ್ಟಿಯ ವಿಶಾಲ ಸಂದೇಶವನ್ನು ವಿವರಿಸುತ್ತಿದ್ದರು. ಇವರ ಪ್ರವಚನಕ್ಕೆ ಮೈಸೂರಿನ ಜೈಲೂ ಹೊರತಲ್ಲ. ಅಲ್ಲಿಗೂ ಒಂದು ಅಥವಾ ಎರಡು ತಿಂಗಳಿಗೊಮ್ಮೆ ಹೋಗುತ್ತಿದ್ದರು. ಅಲ್ಲಿ ಖೈದಿಗಳು ತಯಾರಿಸಿದ ಜಮಖಾನೆ ಆಶ್ರಮದ ದೇವಸ್ಥಾನದಲ್ಲಿ ಇತ್ತೀಚಿನವರೆಗೂ ಉಪಯೋಗಿಸಲ್ಪಡುತ್ತಿತ್ತು. ರಾಜಕೀಯ ವ್ಯಕ್ತಿಗಳ ಸಮೂಹವನ್ನು ಉದ್ದೇಶಿಸಿ ಮಾತನಾಡಬೇಕಾದ ಸಂದರ್ಭಗಳೂ ಇದ್ದವು. ಕೊಳ್ಳೇಗಾಲ, ದಾವಣಗೆರೆ, ಬಳ್ಳಾರಿ ಮುಂತಾದ ಖಾಸಗಿ ರಾಮಕೃಷ್ಣ ಆಶ್ರಮಗಳಿಗೆ ನಿಗದಿತವಾಗಿ ಹೋಗುತ್ತಿದ್ದರು. ದಾವಣಗೆರೆ ಆಶ್ರಮದ ದೇವಸ್ಥಾನಕ್ಕೆ ಶಂಕುಸ್ಥಾಪನೆ ಮಾಡಿ, ಮೂರು ವರ್ಷಗಳ ನಂತರ ಅದೇ ದಿನಾಂಕದಂದು ಅದರ ಪ್ರಾರಂಭೋತ್ಸವವನ್ನೂ ನೆರವೇರಿಸಿದರು. ಹಾರಂಗಿ ಜಲಾಶ್ರಯದ ಅಣೆಕಟ್ಟು ನಿರ್ಮಾಣ ಮಾಡುತ್ತಿದ್ದ ಎಂಜಿನಿಯರ್, ನಿರ್ಮಾಣ ಮುಗಿಯುವವರೆಗೂ ಇವರನ್ನು ತಿಂಗಳಿಗೊಮ್ಮೆ ಕರೆಸಿ ಅಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಿಗೆ ಪ್ರವಚನ ಏರ್ಪಡಿಸುತ್ತಿದ್ದರು. ಅದರ ಲೋಕಾರ್ಪಣೆಯನ್ನೂ ಇವರಿಂದಲೇ ಮಾಡಿಸಿದರು. ತಲಕಾವೇರಿಯ ತೀರ್ಥೋದ್ಭವದ ಹೊಂಡವೂ ಇವರಿಂದ ಉದ್ಘಾಟನೆಯಾಗಿದೆ. ಗೃಹಸ್ಥರು ನಡೆಸುತ್ತಿದ್ದ ಸತ್ಸಂಗಕ್ಕೆ ಮಂಡ್ಯ ಮುಂತಾದ ಸ್ಥಳಗಳಿಗೆ ನಿಗದಿತವಾಗಿ ಹೋಗುತ್ತಿದ್ದರು.

ಆಧ್ಯಾತ್ಮಿಕ ಸಾಧನೆಯಲ್ಲಿ ತಮ್ಮ ಜೀವನವನ್ನು ಮುಂದುವರಿಸಲು ಇಚ್ಛಿಸುತ್ತಿದ್ದ ಕೆಲವು ಯುವಜೀವಿಗಳಿಗೆ ಕೆಲವು ದಿನಗಳು ೩೦ ನಿಮಿಷಗಳಷ್ಟು ಕಾಲ ವಿಶೇಷ ಪ್ರವಚನ ಮಾಡುತ್ತಿದ್ದರು. ಅವರಲ್ಲಿ ಅನೇಕರು ಶಾರದಾ ಮಠವನ್ನು ಸೇರಿ ಸಂನ್ಯಾಸಿನಿಯರಾದರು. ಅವರಲ್ಲಿ ಕೆಲವರು ಕಾಲವಾಗಿದ್ದಾರೆ; ಅನೇಕರು ಇನ್ನೂ ಇದ್ದಾರೆ.

### ಪ್ರವಚನ ಶೈಲಿ ಮತ್ತು ಶಾಸ್ತ್ರವ್ಯಾಖ್ಯಾನದ ವಿಧಾನ

ಇವರ ಪ್ರವಚನ, ಇವರ ಬರವಣಿಗೆಯಂತೆಯೇ ಸರಳ, ನೇರ, ಕ್ರಮಬದ್ಧ, ಮತ್ತು ಗಂಭೀರ. ಶ್ಲೋಕಗಳ ದಾಂಧಲೆ ಇಲ್ಲ. ಪಾಂಡಿತ್ಯದ ಪ್ರದರ್ಶನವಿಲ್ಲ. ಉದ್ಧರಿಸಿದಾಗ ಅದು ಅತ್ಯಂತ ಸೂಕ್ತವೂ ಪರಿಣಾಮಕಾರಿಯೂ ಆಗಿರುತ್ತಿತ್ತು. ಸ್ವಾಮಿ ವಿವೇಕಾನಂದರು ಪರಿವ್ರಾಜಕ ಕಾಲದಲ್ಲಿ, ಭಗವಂತ ತಮ್ಮ ಕೈಹಿಡಿದಿರುವನೋ ಇಲ್ಲವೋ ಎಂದು ಪರೀಕ್ಷಿಸುವುದಕ್ಕಾಗಿ, ತಾವು ಭಿಕ್ಷೆ ಬೇಡುವುದಿಲ್ಲ, ಆಹಾರ ತಾನಾಗಿಯೇ ಬಂದ ಹೊರತು ಸ್ವೀಕರಿಸುವುದಿಲ್ಲ ಎಂದು ಶಪಥ ಮಾಡಿ ಮೂರು ದಿನಗಳು ಉಪವಾಸವಿದ್ದರು. ರೈಲು ನಿಲ್ದಾಣವೊಂದರಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ತನಗೆ ರಾಮನ ಆಜ್ಞೆಯಾಗಿದೆ, ತಾವು ಇದನ್ನು ಸ್ವೀಕರಿಸಬೇಕು ಎಂದು ತಾನು ರಾಮನಿಗೆ ನಿವೇದಿಸಿ ತಂದಿದ್ದ ಆಹಾರವನ್ನು ಸ್ವಾಮೀಜಿಯವರ ಮುಂದಿಟ್ಟಾಗ ಅವರು ಅಶ್ರುಪೂರ್ಣಲೋಚನರಾಗಿ, ಭಗವಂತ ನಂಬಿದವರನ್ನು ಕೈಬಿಡುವುದಿಲ್ಲ ಎಂಬ ಆಶ್ವಾಸನೆಯ ಭಗವದ್ಗೀತೆಯ, '**ಕೌಂತೇಯ! ಪ್ರತಿಜಾನೀಹಿ! ನ ಮೇ ಭಕ್ತಃ ಪ್ರಣಶ್ಯತಿ!**' ಎಂಬ ಶ್ಲೋಕವನ್ನು ಹೇಳುತ್ತಾ ಸ್ವೀಕರಿಸಿದರು. ಈ ಸಂದರ್ಭವನ್ನು

ವಿವರಿಸುವಾಗ ಸೋಮನಾಥಾನಂದರು ಗದ್ಗದಿತರಾಗಿ, ದೃಢ ಸ್ವರದಿಂದ ಈ ಶ್ಲೋಕವನ್ನು ಉಚ್ಚರಿಸುತ್ತಿದ್ದುದು ಸ್ಮರಣೀಯ. ಭಗವಂತ ಸದಾ ನಮ್ಮ ಕೈಹಿಡಿದಿರುವನು ಎಂಬ ವಿಶ್ವಾಸ ಕೇಳುಗರಿಗೆ ದೃಢವಾಗುತ್ತಿತ್ತು.

ಕುಳಿತು ಮಾತನಾಡುವಾಗ ಅವರ ಕೈಗಳು ಸ್ಥಿರವಾಗಿ ಮುಂದಿದ್ದ ಮೇಜಿನ ಮೇಲೆ ಪುಸ್ತಕವನ್ನೊ ಕಾಗದವನ್ನೊ ಹಿಡಿದಿರುತ್ತಿದ್ದುವು. ನಿಂತು ಮಾತನಾಡುವ ಸಮಯದಲ್ಲಿ ಅವರ ಕೈಗಳು ಎದೆಯ ಮೇಲೆ ಮಡಿಸಿರುತ್ತಿದ್ದುವು. ಧ್ವನಿ ಮೇಘಗಂಭೀರ. ಹಾಡುವ ಸ್ವಾಮಿಗಳು ಇವರ ಇಂಪಾದ ದೃಢ ತಾರಸ್ವರವನ್ನು ಕೇಳಿ, 'ಉಸ್ತಾದರ ಕಂಠದಂತಿದೆಯಲ್ಲಾ! ಇವರಂತೂ ಹಾಡುವುದಿಲ್ಲ. ನಮಗಾದರೂ ಇಂತಹ ಧ್ವನಿ ಇರಬಾರದೆ!' ಎಂದು ಅಸೂಯೆ ಪಡುತ್ತಿದ್ದರು. ಅವರು ಮಾತನಾಡುವ ವಿಷಯದಲ್ಲಿ ತಲ್ಲೀನರಾಗಿರುತ್ತಿದ್ದರು. ಪ್ರಾರಂಭ ಮತ್ತು ಕೊನೆಯಲ್ಲಿ 'ಪೂರ್ಣಮದಃ..' 'ಓಂ ಶಾಂತಿಃ' ಎಂಬ ಮಂತ್ರವನ್ನು ಸಾವಧಾನವಾಗಿ ಉಚ್ಚರಿಸುತ್ತಿದ್ದರು. ಪ್ರಾರಂಭದಲ್ಲಿ ಶಾಂತಿ, ಕೊನೆಯಲ್ಲಿ ಧನ್ಯತೆ ಕೇಳುಗರ ಹೃದಯದಲ್ಲಿ ಮೂಡುತ್ತಿತ್ತು. ಪ್ರಾರಂಭದ ಒಂದೆರಡು ವಾಕ್ಯಗಳಲ್ಲಿ ವಿಷಯಕ್ಕೆ ಬಂದುಬಿಡುತ್ತಿದ್ದರು. ಹತ್ತು ನಿಮಿಷಗಳಲ್ಲಿ ಎಲ್ಲರೂ ವಿಷಯದಲ್ಲಿ ಲೀನರಾಗಿರುತ್ತಿದ್ದರು. ಅರ್ಧಘಂಟೆ ಹೊತ್ತಿಗೆ ವಾಕ್ಪ್ರವಾಹ ಮೇರೆ ಮುಟ್ಟುತ್ತಿತ್ತು. ಒಂದು ಘಂಟೆಗೆ ಎರಡು ನಿಮಿಷಗಳಿರುವಾಗ ತೀವ್ರತೆ ಹಾಗೆಯೇ ಇರುವುದನ್ನು ಗಮನಿಸಿದರೆ, ಪ್ರವಚನ ಕಾಲಮಿತಿಯನ್ನು ಮೀರುವುದೆಂದು ಅನ್ನಿಸುತ್ತಿತ್ತು. ಸರಿಯಾಗಿ ೬೦ ನಿಮಿಷಕ್ಕೆ ಮುಗಿಸಿ ಶಾಂತಿಮಂತ್ರವನ್ನು ಉತ್ಕಟ ಶಾಂತಿಯಿಂದ ಉಚ್ಚರಿಸುತ್ತಿದ್ದರು.

ವಿಷಯಕ್ಕೆ ತಕ್ಕಂತೆ, ಸಂದರ್ಭಕ್ಕೆ ತಕ್ಕಂತೆ ಅವರ ವಾಕ್‌ಶೈಲಿ ಏರಿಳಿತಗಳಿಂದ ಬದಲಾಗುತ್ತಿತ್ತು. ಘಟನೆಗಳು ನಮ್ಮೆದುರಿಗೆ ನಡೆದಂತಾಗುತ್ತಿದ್ದುವು. ಗಂಭೀರತೆಯ ಮಧ್ಯದಲ್ಲೂ ತಿಳಿಹಾಸ್ಯ ಹರಡುತ್ತಿತ್ತು. ಅವರೂ ಅದರಲ್ಲಿ ಧಾರಾಳವಾಗಿ ಸೇರಿಹೋಗುತ್ತಿದ್ದರು. ಕರ್ಮಯೋಗದಂತಹ ಉಪನ್ಯಾಸದಲ್ಲಿ ಸಭಿಕರು ಅಷ್ಟೊಂದು ನಗಲು ಸಾಧ್ಯವೇ ಎನ್ನಿಸುವುದು, ಈಗಲೂ ಅವರ ಧ್ವನಿಮುದ್ರಿಕೆಯನ್ನು ಕೇಳಿದವರಿಗೆ. ಭಗವದ್ಗೀತೆ, ಉಪನಿಷತ್ತು, ನಾರದ ಭಕ್ತಿ ಸೂತ್ರ, ಸಹಸ್ರನಾಮಗಳು – ಇವುಗಳ ಮೇಲೆ ಪ್ರವಚನ ಮಾಡುವಾಗ ಕ್ರಮವಾಗಿ ಪ್ರತಿಯೊಂದು ಪದದ ಭಾವ, ಇಂಗಿತಾರ್ಥವನ್ನು ವಿವರಿಸುವುದನ್ನು ಗಮನಿಸಿದರೆ, ಅದು ಪಾಂಡಿತ್ಯದಿಂದ ಬರುತ್ತಿಲ್ಲ, ತಪಶ್ಚರ್ಯೆಯಿಂದ ಬರುತ್ತಿರುವುದಾಗಿ ವೇದ್ಯವಾಗುತ್ತದೆ. ಸುದೈವದಿಂದ ಅವೆಲ್ಲವೂ ಪುಸ್ತಕದಲ್ಲಿ ಲಭ್ಯ. ಆದರೆ, ಇಂತಹ ವಿವರಣೆ ನಮಗೆ ನಿಜವಾಗಿಯೂ ನಷ್ಟವಾಗಿರುವುದೆಂದರೆ, ಲಲಿತಾ ಮತ್ತು ವಿಷ್ಣು ಸಹಸ್ರನಾಮದ ಬಗ್ಗೆ.

### ಲಲಿತಾ ಸಹಸ್ರನಾಮ

ಲಲಿತಾ ಸಹಸ್ರನಾಮ ಭಕ್ತಿ ಪ್ರಧಾನ, ವಿಷ್ಣು ಸಹಸ್ರನಾಮ ಜ್ಞಾನ ಪ್ರಧಾನ ಎಂದು ಹೇಳುತ್ತಿದ್ದರು. ಲೇಖಕನ ಒತ್ತಾಯವನ್ನು ತಡೆಯಲಾರದೆ, ಅವರಿಗೆ ಅನಾರೋಗ್ಯವಿದ್ದರೂ, ಬರೆಯಲಾಗದಿದ್ದರೂ, 'ಲಲಿತಾಮಾತೆ' ಎಂಬ ಪುಟ್ಟ ಪುಸ್ತಕ ಬರೆದರು. ಅದೊಂದು ಸ್ಯಾಂಪಲ್‌ನಂತಿದೆ. ಎಲ್ಲ ಪ್ರವಚನಗಳಲ್ಲೂ 'ಓಂ ಪೂರ್ಣಮದಃ..' ಹೇಳುತ್ತಿದ್ದರೂ, ಲಲಿತಾಸಹಸ್ರನಾಮದ ಪ್ರವಚನವನ್ನು ಮಾತ್ರ,

**ಯತ್ರೈವ ಯತ್ರೈವ ಮನೋ ಮದೀಯಂ**
**ತತ್ರೈವ ತತ್ರೈವ ತವ ಸ್ವರೂಪಂ ।**
**ಯತ್ರೈವ ಯತ್ರೈವ ಶಿರೋ ಮದೀಯಂ**
**ತತ್ರೈವ ತತ್ರೈವ ಪದದ್ವಯಂ ತೇ ॥**

– ಎಂಬ ಪ್ರಾರ್ಥನೆಯೊಂದಿಗೆ ಪ್ರಾರಂಭಿಸುತ್ತಿದ್ದರು ಮತ್ತು ಮುಗಿಸುತ್ತಿದ್ದರು. ಲಲಿತಾ ಸಹಸ್ರನಾಮದ ಪ್ರವಚನಗಳನ್ನು ಒಮ್ಮೆ ಪ್ರಾರಂಭಿಸಿದರೆ ಮುಗಿಯುವುದಕ್ಕೆ ಸುಮಾರು ಆರು ತಿಂಗಳು ಬೇಕಾಗುತ್ತಿತ್ತು. ಅವರು ಪ್ರವಚನವನ್ನು ಪ್ರಾರಂಭಿಸುವ ರೀತಿಯೇ ನಮ್ಮ ಮನಸ್ಸನ್ನು ಕಲಕುವಂತಿದೆ: ''ನಾವೆಲ್ಲರೂ ತಾಯಿಯ ಬಳಿಯಲ್ಲಿಯೇ ಇದ್ದೆವು. ದೂರದಲ್ಲಿ ಸಂತೆಯ ಗದ್ದಲ ಕೇಳಿಸಿತು. ಮಕ್ಕಳು ಕುತೂಹಲದಿಂದ ಅದೇನೆಂದು ನೋಡಿಬರಲು ತವಕಿಸಿದರು. ತಾಯಿ, ಹೋಗಬೇಡಿ, ನೀವು ದಾರಿ ತಪ್ಪಿಸಿಕೊಂಡು ಬಿಡುತ್ತೀರಿ ಎಂದಳು. ಮಕ್ಕಳು, ಇಲ್ಲ, ನಾವು ಬೇಗನೆ ಬಂದು ಬಿಡುತ್ತೇವೆ ಎಂದು ಹೊರಟರು. ತಾಯಿಗೆ ಗೊತ್ತು, ಮಕ್ಕಳ ಬುದ್ಧಿ. ಕನಿಕರದಿಂದ ಅವರ ಬಟ್ಟೆಯ ತುದಿಗೆ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳೆಂಬ ಮೂರು ಶಕ್ತಿಗಳನ್ನು ಕಟ್ಟಿ ಕಳುಹಿಸಿದಳು, ಅವನ್ನು ಉಪಯೋಗಿಸಿಕೊಂಡು ಮಕ್ಕಳು ತನ್ನೆಡೆಗೆ ಮರಳಲಿ ಎಂದು!'' ಭಕ್ತಿಯ ಮಾಧುರ್ಯ, ಶರಣಾಗತಿಯ ಆರ್ತಭಾವ ಕೇಳುಗರ ಹೃದಯ ತಣಿಯುವಂತೆಯೂ, ಜ್ಞಾನದ ಔನ್ನತ್ಯ ಕೇಳುಗರ ಪ್ರಜ್ಞೆಯನ್ನು ತಿಳಿಯಾಗಿಸಿ ವಿಕಾಸಗೊಳಿಸುವಂತೆಯೂ ಮಾತನಾಡಬಲ್ಲ ಕೌಶಲ ಅವರಿಗಿತ್ತು.

ಅವರು ನಿಂತು ಭಾಷಣ ಮಾಡುತ್ತಿದ್ದ ಧಾಟಿ ಬೇರೆಯಾಗಿರುತ್ತಿತ್ತು. 'ಸಹೋದರ ಸಹೋದರಿಯರೇ' ಎಂದು ಪ್ರಾರಂಭಿಸುತ್ತಿದ್ದರು. ತೀವ್ರತೆ ಕಡಿಮೆ ಇದ್ದರೂ ಸಾಂದ್ರತೆ, ಭಾವುಕತೆ ಎಂದಿನಂತೆ ಇರುತ್ತಿತ್ತು. ಒಂದೆರಡು ಮುಖ್ಯ ವಿಷಯಗಳನ್ನು ಮಾತ್ರ ವಿಶದೀಕರಿಸುತ್ತಿದ್ದರು. ಒಮ್ಮೆ, ಅನೇಕ ಭಾಷಣಕಾರರು ಮಾತನಾಡಬೇಕಾಗಿದ್ದ ಸಂದರ್ಭದಲ್ಲಿ ಇವರ ಸರದಿ ಬರುವ ವೇಳೆಗೆ ಇವರ ೩೦ ನಿಮಿಷಗಳಲ್ಲಿ ಹಿಂದಿನವರು ೨೦ ನಿಮಿಷಗಳನ್ನು ಅತಿಕ್ರಮಿಸಿದ್ದರು. ಇವರು ಮಾತನಾಡಲು ಎದ್ದಾಗ, ತಾವು ಕಾಲಕ್ಕೆ ಭಿಕ್ಷೆ ಬೇಡುವುದಿಲ್ಲವೆಂದು ಹೇಳಿ, ಉಳಿದ ೧೦ ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಿದರು.

### ಆಕಾಶವಾಣಿಯ ಭಾಷಣಗಳು

ಮೈಸೂರು ಮತ್ತು ಬೆಂಗಳೂರಿನ ಆಕಾಶವಾಣಿಯಿಂದ ಕೆಲವು ನಿಮಿಷಗಳ ಅವಧಿಯ ಅನೇಕ ಭಾಷಣಗಳು ಬಿತ್ತರವಾಗಿವೆ. ಅವರ ಧ್ವನಿ ಪ್ರಸಾರಕ್ಕೆ ಹೇಳಿ ಮಾಡಿಸಿದಂತಿತ್ತು. ಅವರಿಗೆ ಧ್ವನಿ–ಪರೀಕ್ಷೆಯನ್ನೇ ಮಾಡುತ್ತಿರಲಿಲ್ಲ. ಏಕಂ ಸತ್, ಗಾಂಧೀಜಿ ಮತ್ತು ಗೀತಾಭ್ಯಾಸ, ಅಹಿಂಸಾವತಾರ, ವಿವೇಕಾನಂದರ ಪತ್ರಗಳ ಆಗ್ನೇಯಾಸ್ತ್ರಗಳು – ಮುಂತಾದ ಅನೇಕ ಭಾಷಣಗಳು ಆಕಾಶವಾಣಿಯಿಂದ ಆಗಾಗ ಬಿತ್ತರವಾಗುತ್ತಿದ್ದುವು.

## ಶೀಲಸೌಂದರ್ಯ

ಶೀಲಸೌಂದರ್ಯ ಎಲ್ಲಿರಲಿ ಅವರ ಮನಸ್ಸನ್ನು ಸೂರೆಗೊಳ್ಳುತ್ತಿತ್ತು. ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿ ಲಾಟುವಿನ ಕಳೆದು ಹೋದ ಚಪ್ಪಲಿಯನ್ನು ಹುಡುಕಿಕೊಂಡು ಹೋದುದು, ಶಾರದಾ ದೇವಿಯವರು ಮುಸಲ್ಮಾನನಿಗೆ ಊಟ ಬಡಿಸಿ, 'ರಾಖಾಲ ಹೇಗೆ ನನ್ನ ಮಗನೊ, ಹಾಗೆಯೇ ನೀನೂ ನನ್ನ ಮಗ' ಎಂದು ಹೇಳುತ್ತಾ ಅವನ ಎಂಜಲೆಲೆಯನ್ನು ಅವರೇ ತೆಗೆದುಹಾಕಿದುದು, ವಿವೇಕಾನಂದರು ಗಿರೀಶಚಂದ್ರ ಘೋಷರನ್ನು ತಮ್ಮ ಪಕ್ಕದಲ್ಲಿ ಕುಳ್ಳಿರಿಸಿಕೊಂಡು, 'ಜಿ.ಸಿ., ರಾಮಕೃಷ್ಣರ ಬಗ್ಗೆ ಏನನ್ನಾದರೂ ಹೇಳು' ಎಂದಾಗ, ಆತ ಅಂಜಲಿಬದ್ಧನಾಗಿ, 'ಯಾರು ಆಜನ್ಮ ಬ್ರಹ್ಮಚಾರಿಯಾದ ವಿವೇಕಾನಂದರಂತಹ ವ್ಯಕ್ತಿಯೊಡನೆ ನನ್ನನ್ನು ಏಕಾಸನದಲ್ಲಿ ಕುಳಿತುಕೊಳ್ಳುವಂತೆ ಮಾಡಿದರೋ ಅವರ ಬಗ್ಗೆ ನಾನೇನು ಹೇಳಲಿ?' ಎಂದು ಅಶ್ರುಪೂರ್ಣನಾಗಿ ಹೇಳಿದುದು – ಇಂತಹ ಸಂದರ್ಭಗಳಲ್ಲಿ ಸೋಮನಾಥಾನಂದರ ಕಂಠ ಬಿಗಿದುಬರುತ್ತಿತ್ತು. ಕೆಲವು ಕ್ಷಣಗಳು ಮಾತನಾಡಲಾರದೆ, ನಂತರ ಮುಂದುವರಿಸುತ್ತಿದ್ದರು. ಒಮ್ಮೆ ಬೆಂಗಳೂರಿನ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ರಾಮಾಯಣದ ಪಾತ್ರಗಳ ಬಗ್ಗೆ ಮಾತನಾಡುವಾಗ ಸೀತೆಯ ವಿಷಯಕ್ಕೆ ಬಂದಾಗ ಅನೇಕ ಬಾರಿ ಭಾವಪೂರ್ಣರಾಗಿ ಮುಂದುವರಿಯಲು ಕಷ್ಟವಾಯಿತು. ಸಾರ್ವಜನಿಕ ಉಪನ್ಯಾಸ ಅಪೂರ್ಣವಾಗುವುದೋ ಎಂದು ಸಭಿಕರಿಗೆ ಕಳವಳ ಉಂಟಾಯಿತು. ಆಗಾಗ್ಗೆ ಸುಧಾರಿಸಿಕೊಂಡು ಅವರು ಆ ಪ್ರವಚನವನ್ನು ಮುಗಿಸಿದರು.

## ಸೋಮನಾಥಾನಂದರ ವ್ಯಕ್ತಿತ್ವ

ಅವರ ವ್ಯಕ್ತಿತ್ವ, ಅವರ ಬರವಣಿಗೆ ಮತ್ತು ಮಾತಿನಷ್ಟೇ ಸರಳ. ಅಪಾರ ಸಾಹಿತ್ಯ ರಚನೆ, ಪ್ರವಚನಕ್ಕಾಗಿ ಪ್ರಯಾಣ, ಆಶ್ರಮದ ಕೆಲಸ ಕಾರ್ಯಗಳು – ಇವು ಅವರನ್ನು ಕಾಲಕ್ಕೆ ಜಿಪುಣರನ್ನಾಗಿ ಮಾಡಿದ್ದುವು. ಇತರರು ಹೇಳಿದ್ದನ್ನು ಕೇಳಿಸಿಕೊಳ್ಳುತ್ತಿದ್ದರು. ಸೂತ್ರದಂತಹ ಮಾತಿನಿಂದ ಉತ್ತರಿಸುತ್ತಿದ್ದರು. ಶಿಸ್ತಿನ ದಿನಚರಿ. ಕಟ್ಟುನಿಟ್ಟಿನ ಕಾಲನಿಯಮ. ಬೆಳಗ್ಗೆ, ಮಧ್ಯಾಹ್ನ, ಸಂಜೆ ಧ್ಯಾನ. ಸದಾ ಜಪ. ಸ್ವಾಧ್ಯಾಯ, ಪ್ರವಚನ ಒಟ್ಟಿಗೆ ಸಾಗುತ್ತಿದ್ದುವು. ಧ್ಯಾನಮಯ ವಾತಾವರಣ ಮತ್ತು ಅಗರಬತ್ತಿಯ ಸುಗಂಧದಿಂದ ಕೂಡಿತ್ತು ಅವರ ಕೊಠಡಿ. ಅವರ ಸಮ್ಮುಖದಲ್ಲಿ ಪಾವಿತ್ರ್ಯತೆಯನ್ನು ಅನುಭವಿಸಬಹುದಾಗಿತ್ತು. ಸಂಜೆಯ ನಡಿಗೆ ೧ ಗಂಟೆ ೩೫ ನಿಮಿಷಗಳು. ಆ ಸಮಯದಲ್ಲಿ ಅವರು ಸಾಹಿತ್ಯ ರಚನೆ, ತತ್ತ್ವಪ್ರತಿಪಾದನೆ ಅಥವಾ ಆಡಳಿತದ ಸಮಸ್ಯೆಗಳನ್ನು ಕುರಿತು ಚಿಂತಿಸುತ್ತಿದ್ದರು. ಏಕಾಂತ, ಕಗ್ಗತ್ತಲು ಅವರಿಗೆ ಪ್ರಿಯ. ನಿರಪೇಕ್ಷೆ. ಯಾರಿಂದಲೂ ಏನನ್ನೂ ನಿರೀಕ್ಷಿಸುತ್ತಿರಲಿಲ್ಲ. ತಮ್ಮ ಬಳಿ ಇದ್ದ ವಸ್ತುಗಳು ಇತರರಿಗೆ ಇಷ್ಟವಾಗಿದೆ ಎಂದು ತೋರಿದರೆ ಅವರಿಗೆ ಕೊಟ್ಟುಬಿಡುತ್ತಿದ್ದರು. ಸಮಾರಂಭಗಳಲ್ಲಿ ಅವರಿಗೆ ಕೊಟ್ಟ ಶಾಲು, ಕಲಾಕೃತಿ ಮುಂತಾದ ವಸ್ತುಗಳನ್ನು ಯಾರಿಗಾದರೂ ತಕ್ಷಣ ಕೊಟ್ಟುಬಿಡುತ್ತಿದ್ದರು. ಸನ್ಮಾನಕ್ಕಾಗಿ ಅವರಿಗೆ ಹಾಕಿದ್ದ ಹಾರ ಮುಂತಾದುವನ್ನು ಆಶ್ರಮದ ಗೇಟಿನ ಒಳಗೆ ಬಂದ ಕೂಡಲೆ ಕಸದ ಗುಂಡಿಗೆ ಎಸೆದು, ನಂತರ ಅವರ ಕೊಠಡಿಗೆ ಹೋಗುತ್ತಿದ್ದರು. ಕೀರ್ತಿಯನ್ನು ಶನಿ ಎಂದು ದೂರ ವಿಟ್ಟಿದ್ದರು. ಪ್ರಶಂಸಾಪತ್ರಗಳನ್ನು ಯಾರಿಗೂ ತೋರಿಸದೆ ಹರಿದು ಕಸದ ಬುಟ್ಟಿಗೆ ಹಾಕುತ್ತಿದ್ದರು. ಅವರ ಕೃತಿಗಳ ಬಗ್ಗೆ ಯಾರೊಂದಿಗೂ ಯಾವ ಸಮಯದಲ್ಲೂ ಪ್ರಸ್ತಾಪಿಸುತ್ತಿರಲಿಲ್ಲ. ಅವರ ಹೆಸರಿನ ಹಿಂದೆ 'ಸ್ವಾಮಿ' ಎಂದು ಪುಸ್ತಕಗಳಲ್ಲಾಗಲಿ, ವ್ಯವಹಾರದಲ್ಲಾಗಲಿ, ಸಹಿಯಲ್ಲಾಗಲಿ ಸೇರಿಸುತ್ತಿರಲಿಲ್ಲ. ಪ್ರಾರಂಭದಲ್ಲಿ ಅವರ ಪುಸ್ತಕಗಳ ಮೇಲೆ ಅವರ ಹೆಸರನ್ನೇ ಹಾಕುತ್ತಿರಲಿಲ್ಲ. 'ಸ್ತವ ಕುಸುಮಾಂಜಲಿ'ಯ ಪ್ರಥಮ ಮುದ್ರಣದಲ್ಲಿ ಮುನ್ನುಡಿಗೆ ಸ್ವಾಮಿ ಶಾಂಭವಾನಂದರ ಹೆಸರನ್ನು ಹಾಕಿದ್ದರು. ಅನುವಾದಗಳಲ್ಲಿ ಅವರ ಹೆಸರು ಎಲ್ಲೂ ಇಲ್ಲ.

ಸ್ವಾಮಿ ಶಾಂಭವಾನಂದರು ಕೆಚ್ಚೆದೆಯ ಧೀರ ಸಂನ್ಯಾಸಿಗಳು. ಅವರೊಂದಿಗೆ ಇವರು ೩೫ ವರ್ಷಗಳು ವಿಧೇಯತೆ, ನಮ್ರತೆಯಿಂದ ಇದ್ದರು. ಅಷ್ಟು ಕಾಲ ಅವರೊಡನೆ ಇದ್ದವರು ಇವರೊಬ್ಬರೇ. ಇಬ್ಬರದೂ ಏಕಾಂಗ ಸಾಹಸ. ಬರಿಗೈಯಿಂದ ಅವರು ಕಟ್ಟಡ ಮತ್ತು ಸಂಸ್ಥೆಗಳನ್ನು ನಿರ್ಮಿಸಿದರು, ಇವರು ಸಾಹಿತ್ಯ ಮತ್ತು ಅದರ ಪ್ರಕಾಶನವನ್ನು ನಿರ್ಮಿಸಿದರು. ಇಬ್ಬರ ಸಾಧನೆಗಳಿಗೂ ಆಧಾರ, ಶ್ರೀರಾಮಕೃಷ್ಣರ ಮೇಲಿನ ಶ್ರದ್ಧೆ, ಭಕ್ತಿ, ಮತ್ತು ಸಂಸ್ಥೆಗೆ ನಿಷ್ಠೆ ಹಾಗೂ ದುಡಿತ. ಶಾಂಭವಾನಂದರು ಇವರ ಬರವಣಿಗೆಯ ಕಡೆ ಗಮನ ಕೊಡುತ್ತಿರಲಿಲ್ಲ. ಕಟ್ಟಡ ನಿರ್ಮಾಣಕ್ಕೆ ಹಣ ಸಂಗ್ರಹಣೆಗೆ ಸಾಮಾನ್ಯವಾಗಿ ಮುಂಬಯಿಗೆ ಪ್ರಯಾಣಿಸುತ್ತಿದ್ದರು. ಇವರು ಪ್ರವಚನಕ್ಕೆ ಪ್ರಯಾಣ ಮಾಡುತ್ತಿದ್ದರು. ಅವರು ಪ್ರಾರಂಭಿಸಿದ್ದ ವೇದಾಂತ ಕಾಲೇಜಿನ ಬೃಹತ್ ಕಟ್ಟಡವನ್ನು ಎರಡು ವರ್ಷಗಳಲ್ಲಿ (೧೯೭೪) ಪೂರ್ಣಗೊಳಿಸಿದರು. ಅದರ ಭವ್ಯ ಗೋಪುರವನ್ನು ೧೯೮೫ರಲ್ಲಿ ನಿರ್ಮಿಸಿದರು. ಆಶ್ರಮದ ಗೋಪುರವನ್ನು ೧೯೮೨ರಲ್ಲಿ ಕಟ್ಟಿಸಿದರು. ಶಾಂಭವಾನಂದರಿಗೆ, ''ಇದು ಪುಟ್ಟ ಕೆಲಸ, ಆದ್ದರಿಂದ ಅದನ್ನು ನನಗೆ ಬಿಟ್ಟರು'' ಎಂದು ಹಾಸ್ಯವಾಗಿ ಹೇಳುತ್ತಿದ್ದರು. ಯಾಚಿಸುವುದು ಇವರ ಪ್ರಕೃತಿಗೆ ವಿರೋಧ. ಇತರ ಆಶ್ರಮಗಳ ಸಂನ್ಯಾಸಿಗಳು, ಸಂನ್ಯಾಸಿನಿಯರು ಹಣ ಸಂಗ್ರಹಣೆಗೆ ಬಂದಾಗ ದಾನಿಗಳಿಗೆ ಪರಿಚಯ ಮಾಡಿಸಿ ಸಹಾಯ ಮಾಡುತ್ತಿದ್ದರು. ಕಿರಿಯ ಸಂನ್ಯಾಸಿಗಳು ಬೆಳೆಯಬೇಕಾದರೆ ಅವರಿಗೆ ಜವಾಬ್ದಾರಿಯನ್ನು ಕೊಡಬೇಕು ಎನ್ನುವುದು ಅವರ ಮತ. ಆಶ್ರಮದ ಆಡಳಿತದಲ್ಲಿ ಅತ್ಯಂತ ಕಡಿಮೆ ವಿರೋಧದ ಹಾದಿ ಅವರದಾಗಿತ್ತು.

ವೈದ್ಯರು ಇವರ ಬಲಗೈ ಬೆರಳಿನ ಗಿಣ್ಣುಗಳು ರಕ್ತ ಹೆಪ್ಪುಗಟ್ಟಿದಂತೆ ಇರುವುದಕ್ಕೆ ಕಾರಣ ಕೇಳಿದರು. ಇವರಿಗೂ ಹೊಳೆಯಲಿಲ್ಲ. ಅನೇಕ ದಿನಗಳು ಚಿಂತಿಸಿದ ಮೇಲೆ ನಿತ್ಯ ಜಪಮಾಲೆ ತಗಲಿ ಹಾಗಾಗಿದೆಯೆಂದು ಇವರಿಗೆ ತಿಳಿಯಿತು. ಜಪ ಮಾಡಿ ಮಾಡಿ ಜಪಮಣಿಗಳು ನುಣ್ಣಗಾಗಿದ್ದುವು. ಇವರಿಗಿಂತ ಹಿರಿಯರಾದ ಸಂನ್ಯಾಸಿಗಳು ಇವರಲ್ಲಿ ಕಂಡ ಪ್ರಧಾನ ಗುಣವೆಂದರೆ, ನಿರ್ಲಿಪ್ತತೆ. ಭಕ್ತಿ, ಜ್ಞಾನ, ವೈರಾಗ್ಯಗಳ ಅಧ್ಯಾತ್ಮಶ್ರೀ ಇವರಲ್ಲಿ ಆಳವಾಗಿದ್ದುದರಿಂದ ಶ್ರೀರಾಮಕೃಷ್ಣರ ಭಾವಧಾರೆ ಇವರ ಮೂಲಕ ೫೫ ವರ್ಷಗಳು ಹರಿಯಿತು. ಇವರ ಸಂಸರ್ಗಕ್ಕೆ ಬಂದವರಿಗೂ ಅದು ತಗುಲಿತು. ತಮಗೆ ಬಂದ ಕೀರ್ತಿಯನ್ನೆಲ್ಲ ಗುರುಮಹಾರಾಜರ ಪದತಲದಲ್ಲಿ ಅರ್ಪಿಸಿ ನಿಮಿತ್ತಮಾತ್ರರಾಗಿ, ನಿರಾತಂಕರಾಗಿ ಶ್ರೀರಾಮಕೃಷ್ಣರ ಭಾವಧಾರೆಗೆ ವಾಹಕರಾಗುವುದರ ಜತೆಗೆ ಕನ್ನಡತಾಯಿಯ ಸೇವೆಯನ್ನೂ ಮಾಡಿದರು. ✽